Government Order No. UDD 07 UWS 2011, Bangalore
Dated 20.7.2011

The Government has approved the revised Financial Model for taking up Water Supply and Under Ground Drainage projects and the revised rate of water supply and maximum rates for consumers in all the City Corporations (excluding Bangalore city), City Municipal Councils/Town Municipal Councils/Town Panchayaths as per the details given below:

**(1) Water Tariff**

(a) The rate fixed for every month as per water usage

| | Details | Existing | | | |
|---|---|---|---|---|---|
| Sl. No. | Category of consumer | Min KL | Max KL | Rs. Per KL | For every connection Minimum Rate Rs |
| A | As per Usage (with meter) | | | | |
| 1 | Domestic | 0 | 8 | 7 | 56 |
| | | 8 | 15 | 9 | |
| | | 15 | 25 | 11 | |
| | | More than 25 | | 13 | |
| | | | | | |
| 2 | Non -Domestic | 0 | 8 | 14 | 112 |
| | | 8 | 15 | 18 | |
| | | 15 | 25 | 22 | |
| | | More than 25 | | 26 | |
| 3 | Commercial/Industrial | 0 | 8 | 28 | 224 |
| | | 8 | 15 | 36 | |
| | | 15 | 25 | 44 | |
| | | More than 25 | | 52 | |

(b) Minimum monthly rates for water supply connections without water meter

| | All categories | Fixed Charges as per table below | | |
|---|---|---|---|---|
| | Water supply – without Meter Minimum Monthly Rs. | | | |
| | | For every connection Minimum monthly Rate in Rs. | | |
| Sl. No. | Category of Consumer | City Corporations | CMCs | TMCs/TPs |
| 1 | Domestic | 175 | 120 | 80 |
| 2 | Non-domestic | 350 | 240 | 160 |
| 3 | Commercial/Industrial | 700 | 480 | 320 |

(c) One time Water Supply Connection charges

| | | Existing | | |
|---|---|---|---|---|
| Sl. No. | Category of consumer | City Corporations | CMCs | TMCs/TPs |
| 1 | Domestic | 2500 | 2000 | 1500 |
| 2 | Non-domestic | 5000 | 4000 | 8000 |
| 3 | Commercial/Industrial | 10000 | 8000 | 6000 |

(d) UGD user charges rates with/without Meter Minimum Monthly

| | Existing | | | |
|---|---|---|---|---|
| | For every connection Minimum monthly Rate in Rs. | | | |
| Sl. No. | Category of consumer | City Corporations | CMCs | TMCs/TPs |
| 1 | Domestic | 15 | 15 | 15 |
| 2 | Non-domestic | 30 | 30 | 30 |
| 3 | Commercial/Industrial | 60 | 60 | 60 |

(e) Financial Model for water supply Projects

| Sl.No. | Category | Govt. grants | Loan from financial institution | ULB share |
|---|---|---|---|---|
| 1 | City Corporations | 40% | 50% | 10% |
| 2 | City Municipal Councils | 60% | 30% | 10% |
| 3 | Town Municipal Councils | 75% | 20% | 5% |
| 4 | Town Panchayaths | 95% | - | 5% |

(f) Financial Model for UGD Projects

| Sl.No. | Category | Govt. grants | Loan from financial institution | ULB share |
|---|---|---|---|---|
| 1 | City Corporations | 50% | 35% | 15% |
| 2 | City Municipal Councils | 70% | 20% | 10% |
| 3 | Town Municipal Councils | 75% | 20% | 5% |
| 4 | Town Panchayaths | 95% | -- | 5% |

By order and in the name of the
Governor of Karnataka

Sd/-
Under Secretary to Government
Urban Development Department.

***Note:*** *This is the translated copy of original circular for clarifications refer to original Kannada circular.*

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನಗರ ನೀರು ಸರಬರಾಜು ಯೋಜನೆ ಮತ್ತು ಒಳಚರಂಡಿ ಯೋಜನೆಗಳ ಆರ್ಥಿಕ ಮಾದರಿ ಮತ್ತು ಕುಡಿಯುವ ನೀರಿನ ದರಗಳನ್ನು ಪರಿಷ್ಕರಿಸಲು ಅನುಮೋದನೆ ನೀಡುವ ಕುರಿತು.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ:ವನಇ 10 ಯುಡಬ್ಲ್ಯೂಎಸ್ 94 ದಿನಾಂಕ:11.08.1994.

2) ಸರ್ಕಾರದ ಆದೇಶ ಸಂಖ್ಯೆ:ನಅಇ 204 ಯೂಎಂಎಸ್ 95 ದಿನಾಂಕ;15.11.96

****

ಪ್ರಸ್ತಾವನೆ:

ಬೆಂಗಳೂರು ನಗರವನ್ನು ಹೊರತು ಪಡಿಸಿ. ಕರ್ನಾಟಕ ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿ ರಾಜ್ಯ ಸರ್ಕಾರದ ಯೋಜನೆಯಡಿ ಕೈಗೆತ್ತಿಕೊಳ್ಳುವ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳ ಆರ್ಥಿಕ ಮಾದರಿಯನ್ನು ಮತ್ತು ಗ್ರಾಹಕರಿಗೆ ಸರಬರಾಜು ಮಾಡುವ ನೀರಿನ ದರ ಹಾಗೂ ನಿರ್ವಹಣಾ ವ್ಯವಸ್ಥೆಯ ದರಗಳನ್ನು ಸರ್ಕಾರವು ಮೇಲೆ ಓದಲಾದ ಕ್ರಮಾಂಕ 1 ಮತ್ತು 2ರ ಆದೇಶಗಳಲ್ಲಿ ನಿಗದಿಪಡಿಸಿ ಜಾರಿಗೆ ತರಲಾಗಿತ್ತು. ಮೇಲೆ ಓದಲಾದ ಕ್ರಮಾಂಕ(2)ರ ಸರ್ಕಾರದ ಆದೇಶದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಂತ ಮನೆ/ಬಾಡಿಗೆದಾರರು. ಜಂಟಿ ಅಥವಾ ಏಕ ವ್ಯಕ್ತಿ ಖಾತಾ ಹೊಂದಿರುವ ಎಲ್ಲಾ ಮನೆಗಳಿಗೆ. ಸಂಪರ್ಕವನ್ನು ಕಲ್ಪಿಸಲು ಮತ್ತು ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿನ ಶೇ.100% ರಷ್ಟು ನೀರಿನ ಸಂಪರ್ಕಗಳಿಗೆ ಮೀಟರ್‌ಗಳನ್ನು 6 ತಿಂಗಳ ಒಳಗೆ ಅಳವಡಿಸಲು ಸೂಚಿಸಲಾಗಿತ್ತು.

ನೀರಿನ ದರಗಳನ್ನು ಮತ್ತು ಪರಿಷ್ಕೃತ ನೀರಿನ ದರವನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು 57 ಸ್ಥಳೀಯ ಸಂಸ್ಥೆಗಳು, 5 ಮಹಾನಗರ ಪಾಲಿಕೆಗಳು, 22 ನಗರ ಸಭೆಗಳು ಮತ್ತು 30 ಪುರಸಭೆಗಳಿಗೆ ಎಲ್‌ಐಸಿ/ಹುಡ್ಕೋ/ಎಡಿಬಿ ಇತ್ಯಾದಿ ಸಂಸ್ಥೆಗಳಿಂದ ಆರ್ಥಿಕ ಸಹಾಯದೊಂದಿಗೆ ಚಾಲನೆಗೊಳಿಸಿದ ನೀರು ಸರಬರಾಜು ಯೋಜನೆಗಳ ಗಾತ್ರದ ಆಧಾರದ ಮೇಲೆ ನಿಗದಿಪಡಿಸಿದ ಶಿಫಾರಸ್ಸಿನಂತೆ ಜಾರಿಗೆ ತರಲಾಗಿತ್ತು. ಈ ರೀತಿ ಶಿಫಾರಸ್ಸು ಮಾಡಲಾದ ಕನಿಷ್ಠ ನೀರಿನ ದರಗಳನ್ನು ಸ್ಥಳೀಯ ಸಂಸ್ಥೆಗಳ ನೀರು ಸರಬರಾಜು ನಿರ್ವಹಣೆ ಮತ್ತು ದುರಸ್ಥಿಯ ವೆಚ್ಚ ಹಾಗೂ ಇತರೆ ಸೇವಾ ವೆಚ್ಚಗಳನ್ನೊಳಗೊಂಡಿದ್ದು ಸ್ಥಳೀಯ ಸಂಸ್ಥೆಗಳು ನೀರಿನ ದರಗಳನ್ನು ವಸೂಲಿ ಮಾಡಿ. ಕನನೀಸ ಒಚಮಂಡಳಿಗೆ ಸೇವಾ ವೆಚ್ಚಗಳನ್ನು ಪಾವತಿಸಬೇಕಾಗಿರುತ್ತದೆ.

ಸ್ಥಳೀಯ ಸಂಸ್ಥೆಗಳಲ್ಲಿ ನೀರಿನ ಬಳಕೆಯ ಮೀಟರ್‌ಗಳನ್ನು ಅಳವಡಿಸುವವರೆಗೆ (6 ತಿಂಗಳಲ್ಲಿ ಎಲ್ಲಾ ನೀರು ಸಂಪರ್ಕಗಳಿಗೆ ಮೀಟರ್ ಅಳವಡಿಸುವ ಷರತ್ತಿಗೊಳಪಟ್ಟು) ಗೃಹಬಳಕೆಗಳಿಗೆ ಕನಿಷ್ಠ ಮಾಸಿಕ ದರ ರೂ.45/- ರಂತೆ ನಿಗದಿ ಪಡಿಸಲು ಸೂಚಿಸಲಾಗಿತ್ತು. ಇದಲ್ಲದೆ. ಸ್ಥಳೀಯ ಸಂಸ್ಥೆಗಳು ಈ ದರಕ್ಕಿಂತ ಹೆಚ್ಚಿನ ದರಗಳನ್ನು ಸದರಿ ಸಂಸ್ಥೆಗೆ ಅನ್ವಯವಾಗುವ ಸೇವಾ ವೆಚ್ಚದ ಆಧಾರದ ಮೇಲೆ ನಿಗದಿ ಪಡಿಸಲು ಸ್ವತಂತ್ರವಾಗಿದ್ದವು. ಗೃಹೇತರ ಬಳಕೆಗಳಿಗೆ ಗೃಹಬಳಕೆಯ ದುಪಟ್ಟರಷ್ಟು ದರ ನಿಗದಿಪಡಿಸಲಾಗಿತ್ತು. ಮತ್ತು ವಾಣಿಜ್ಯ ಮತ್ತು ಕೈಗಾರಿಕಾ ಸಂಪರ್ಕಗಳಿಗೆ ಗೃಹ ಬಳಕೆಯ ದರದ 4 ಪಟ್ಟು ನಿಗದಿ ಪಡಿಸಲಾಗಿತ್ತು. ಬಡ ವರ್ಗದ ಜನರ ಮೀಟರ್ ದರಗಳನ್ನು ಸ್ಥಳೀಯ ಸಂಸ್ಥೆಗಳೇ ಭರಿಸಲು ನಿರ್ದೇಶಿಸಲಾಗಿತ್ತು.

---2/-

ಸ್ಥಳೀಯ ಸಂಸ್ಥೆಗಳು ಸದರಿ ಸರ್ಕಾರಿ ಆದೇಶವನ್ನು ಅನುಷ್ಠಾನಗೊಳಿಸುವಲ್ಲಿ ಭಾಗಶಃ ಯಶಸ್ವಿಯಾಗಿವೆ. ಗೃಹ ಬಳಕೆ ನೀರು ಸಂಪರ್ಕಗಳನ್ನು ಅನುಷ್ಠಾನಗೊಳಿಸಲು ಸ್ಥಳೀಯ ಸಂಸ್ಥೆಯ ಪೂರ್ಣ ಜನಸಂಖ್ಯೆಗೆ ವಿಸ್ತರಿಸಲು ಗುರಿ ಹೊಂದಿದ್ದು, ಅದರಲ್ಲಿ ಶೇ.51% ರಷ್ಟು ಮಾತ್ರ ಯಶಸ್ವಿಯಾಗಲು ಸಾಧ್ಯವಾಗಿದೆ. ಹುಬ್ಬಳ್ಳಿ-ಧಾರವಾಡ, ರಾಮನಗರ-ಚನ್ನಪಟ್ಟಣ, ತುಮಕೂರು, ಮೈಸೂರು ಇತ್ಯಾದಿ ಕೆಲವು ಪ್ರದೇಶಗಳನ್ನು ಹೊರತುಪಡಿಸಿ ಹೆಚ್ಚಿನ ಸ್ಥಳೀಯ ಸಂಸ್ಥೆಗಳಲ್ಲಿ ಮೀಟರ್ ಅಳವಡಿಕೆ ಮಾಡಿರುವುದಿಲ್ಲ. ಇದಲ್ಲದೆ, ಕನಿಷ್ಠ ನೀರಿನ ದರವಾದ ರೂ.45/- ನ್ನು ನಿಗದಿ ಪಡಿಸುವುದು ಸಹ ತುಂಬಾ ಮಂದಗತಿಯಲ್ಲಿ ಸಾಗಿದ್ದು, ಪ್ರಗತಿ ಸರಿಯಾಗಿರುವುದಿಲ್ಲ. ಕೆಲವೇ ಸ್ಥಳೀಯ ಸಂಸ್ಥೆಗಳು ಕನಿಷ್ಠ ನೀರಿನ ದರಗಳನ್ನು ಮೀರಿ ಹೆಚ್ಚಿನ ದರಗಳನ್ನು ನಿಗದಿಪಡಿಸಲು ಕ್ರಮ ವಹಿಸಿರುತ್ತಾವೆ.

ಕರ್ನಾಟಕ ಸರ್ಕಾರವು 2003ರಲ್ಲಿ ಹೊರಡಿಸಿದ, ನಗರ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ನೀತಿಯಲ್ಲಿ, ನಗರ ನೀರು ಸರಬರಾಜು ಬೇಡಿಕೆ ಮತ್ತು ಕ್ರಿಯಾ ಯೋಜನೆಯ ಬಗ್ಗೆ ವೈಜ್ಞಾನಿಕವಾಗಿ ಅಲೋಚಿಸಿ ಈ ಕುರಿತು ಎಲ್ಲಾ ಸಂಭಂದಪಟ್ಟ ಸರ್ಕಾರದ ಪ್ರತಿನಿಧಿಗಳೊಂದಿಗೆ ಚರ್ಚಿಸಿದ ನಂತರ ರಾಜ್ಯದ ನೀತಿಯನ್ನು ರೂಪಿಸಲು ಒತ್ತುಕೊಡುತ್ತದೆ. ಭವಿಷ್ಯದಲ್ಲಿ ಮೂಲಭೂತ ಸೌಕರ್ಯಗಳ ಮೇಲೆ ಬಂಡವಾಳ ಹೂಡಿಕೆಗಳನ್ನು, ಮತ್ತು ಅತ್ಯುತ್ತಮ ನೀರು ಬಳಕೆ ಮತ್ತು ಮೂಲಭೂತ ಅಭಿವೃದ್ಧಿ ಕುರಿತು ಆರ್ಥಿಕ ಸಂಪತ್ತನ್ನು ಸಾಮಾಜಿಕವಾಗಿ ಹಿಂಪಡೆಯುವುದರ ಮೇಲೆ ಅವಲಂಬಿಸಬೇಕಾಗಿರುತ್ತದೆ.

ಮುಂದುವರೆದು ಯೋಜನಾ ವೆಚ್ಚವನ್ನು ಹಿಂಪಡೆಯುವ ದೃಷ್ಟಿಯಿಂದ ನೀರಿನ ದರಗಳನ್ನು ಸೂಕ್ತವಾಗಿ ನಿಗದಿಪಡಿಸಿ ಸದರಿ ದರಗಳು, ನಿರ್ವಹಣೆ ದುರಸ್ಥಿ ಮತ್ತು ಸೇವಾ ವೆಚ್ಚಗಳನ್ನು ಸಮರ್ಪಕವಾಗಿ ಹಿಂಪಡೆಯುವಂತೆ ನಿಗದಿಪಡಿಸುವುದು ಸೂಕ್ತವಾಗಿರುತ್ತದೆ. ಸರ್ಕಾರವು ನೀರಿನ ದರಗಳ ಪರಿಷ್ಕರಣೆಯನ್ನು ಅವುಗಳ ಬಳಕೆಯ ಆಧಾರವಾಗಿ ಮತ್ತು ಪೋಲಾಗುವ ನೀರಿನ ಗಾತ್ರದ ಮೇಲೆ ಸಾಮಾನ್ಯ ಜೀವನಕ್ಕೆ ಅಗತ್ಯವಿರುವ ಮತ್ತು ಬಡತನ ರೇಖೆಗಿಂತ ಕೆಳಗಿರುವವರಿಗೆ ಅತ್ಯಧಿಕ ಕಡಿಮೆ ವೆಚ್ಚದಲ್ಲಿ ನೀರು ಸರಬರಾಜು ಮಾಡಲು ಒತ್ತುಕೊಡುತ್ತದೆ. ಇದಲ್ಲದೆ, ಸದರಿ ನೀತಿಯೂ ಸ್ಥಳೀಯ ಸಂಸ್ಥೆಗಳು ಶೇ.100ರಷ್ಟು ನೀರು ಸಂಪರ್ಕಗಳಿಗೆ ಮೀಟರ್‌ಗಳನ್ನು ಅಳವಡಿಸಿ ಅವುಗಳ ಬಳಕೆಯ ಆಧಾರದ ಮೇಲೆ ನೀರಿನ ದರಗಳನ್ನು ವಿಧಿಸಿ ಬಹುಕಾಲದವರೆಗಿನ ಆಧಾರದ ಮೇಲೆ ನೀರಿನ ವಸೂಲಿ ಕ್ರಮಗಳನ್ನು ಅನುಸರಿಸಲು ಪ್ರೋತ್ಸಾಹಿಸುತ್ತದೆ.

ನೀರು ಸರಬರಾಜು ಮತ್ತು ಒಳಚರಂಡಿ ಸೇವೆಗಳನ್ನು ಮಿತ್ಯಕರವಾಗಿ ಮತ್ತು ಸಮರ್ಪಕವಾಗಿ ನೀಡಲು ಸ್ಥಳೀಯ ಸಂಸ್ಥೆಗಳು ರಾಜಸ್ವ ವಸೂಲಿಯನ್ನು ಸೇವಾ ಶುಲ್ಕಗಳಿಂದ ಬಲಪಡಿಸಿಕೊಳ್ಳಬೇಕಾಗಿರುತ್ತದೆ ಮತ್ತು ಸರ್ಕಾರದ ಅನುದಾನ/ಸಾಲಗಳನ್ನು ಪಡೆಯುವುದನ್ನು ಕಡಿತಗೊಳಿಸಬೇಕಾಗಿರುತ್ತದೆ. ಆದ್ದರಿಂದ, ನೀರಿನ ದರಗಳನ್ನು ಪರಿಷ್ಕರಿಸುವುದು ನೀರು ಸರಬರಾಜು ಯೋಜನೆಗಳ ಕಾರ್ಯಸಾಧ್ಯತೆ ಮತ್ತು ರಾಜ್ಯದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ 2003ರ ನೀತಿಯನ್ನು ಕಾರ್ಯರೂಪಕ್ಕೆ ತಂದಂತಾಗುತ್ತದೆ.

ನೀರಿನ ದರಗಳ ಪರಿಷ್ಕರಣೆ ಮತ್ತು ನೀರು ಸರಬರಾಜು ಹಾಗೂ ಒಳಚರಂಡಿ ಯೋಜನೆಗಳ ಆರ್ಥಿಕ ಮಾದರಿಯನ್ನು ಪರಿಷ್ಕರಿಸಲು ಕನನೀಸ ಮತ್ತು ಒಳ ಚರಂಡಿ ಮಂಡಳಿ ಮತ್ತು ಕೆ.ಯು.ಐ.ಡಿ.ಎಫ್.ಸಿ., ವತಿಯಿಂದ ಅಧ್ಯಯನ ಮಾಡಿದ್ದು, ಸದರಿ ವರದಿಯ ಮೇಲೆ ಒಂದು ಸಮಿತಿಯನ್ನು ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ರವರ ಅಧ್ಯಕ್ಷತೆಯಲ್ಲಿ ಈ ಎಲ್ಲಾ ವರದಿಗಳನ್ನು ಅಧ್ಯಯನ ಮಾಡಿ ಅಂತಿಮ ಶಿಫಾರಸ್ಸನ್ನು ಈ ಕೆಳಕಂಡ ನಾಲ್ಕು ಅಂಶಗಳ ಮೇಲೆ ಸಲ್ಲಿಸಲು ಸೂಚಿಸಲಾಯಿತ್ತು.

---3/-

1) ನೀರಿನ ದರಗಳ ನಿಗದಿಪಡಿಸುವ ಬಗ್ಗೆ.
2) ನೀರು ಸರಬರಾಜು ಯೋಜನೆಗಳ ಆರ್ಥಿಕ ಮಾದರಿ ಬಗ್ಗೆ.
3) ಒಳಚರಂಡಿ ವ್ಯವಸ್ಥೆಗಳಿಗೆ ಬಳಕೆದಾರರ ದರವನ್ನು ನಿಗದಿಪಡಿಸುವ ಬಗ್ಗೆ.
4) ಒಳಚರಂಡಿ ವ್ಯವಸ್ಥೆಗಳಿಗೆ ಆರ್ಥಿಕ ಮಾದರಿಯನ್ನು ನಿಗದಿಪಡಿಸುವ ಬಗ್ಗೆ.

ಸದರಿ ಸಮಿತಿಯು 5 ಮಹಾನಗರಪಾಲಿಕೆಗಳು, 5 ನಗರಸಭೆಗಳು , 4 ಪುರಸಭೆಗಳು ಮತ್ತು 4 ಪಟ್ಟಣ ಪಂಚಾಯಿತಿಗಳ ನೀರು ಸರಬರಾಜು ನಿರ್ವಹಣೆ ಮತ್ತು ದುರಸ್ಥಿಯ ವೆಚ್ಚಗಳ ಬಗ್ಗೆ ಅಧ್ಯಯನ ಮಾಡಿ ಈ ಕೆಳಕಂಡ ನೀರಿನ ದರಗಳನ್ನು ನಿಗದಿಪಡಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತದೆ.

- 0-8 ಕಿಲೋ ಲೀಟರ್ ವರೆಗೆ ದರದ ಹಂತವು – ರೂ.7/- ಪ್ರತಿ ಕಿ.ಲೀ.,
- 8-15 ಕಿಲೋ ಲೀಟರ್ ವರೆಗೆ ದರದ ಹಂತವು – ರೂ.9/- ಪ್ರತಿ ಕಿ.ಲೀ.,
- 15-25 ಕಿಲೋ ಲೀಟರ್ ವರೆಗೆ ದರದ ಹಂತವು – ರೂ.11/- ಪ್ರತಿ ಕಿ.ಲೀ.,
- 25ಕ್ಕಿಂತ ಅಧಿಕ ಕಿ.ಲೀ., ವರೆಗೆ ದರದ ಹಂತವು – ರೂ.13/- ಪ್ರತಿ ಕಿ.ಲೀ.,

ಈ ಹಿಂದೆ ನೀರಿನ ದರಗಳ ಬಗ್ಗೆ ಮೇಲೆ ಓದಲಾದ ಕ್ರಮಾಂಕ(2)ರ ದಿನಾಂಕ:15-11-1996ರಲ್ಲಿ ಹೊರಡಿಸಿದ ಸರ್ಕಾರದ ಆದೇಶದ ದರಗಳನ್ನು ಇಲ್ಲಿಯವರೆಗೆ ಪರಿಷ್ಕರಿಸಿಲ್ಲ. ಕಳೆದ 14 ವರ್ಷಗಳಲ್ಲಿ ಸುರಕ್ಷಿತ ಕುಡಿಯುವ ನೀರಿನ ಸರಬರಾಜು ವೆಚ್ಚವು ಬಹಳಷ್ಟು ಹೆಚ್ಚಾಗಿದ್ದು, ನಿರ್ವಹಣಾ ಸಿಬ್ಬಂದಿಯ ವೇತನವು ಶೇ.133ರಷ್ಟು ವಿದ್ಯುತ್ ಶಕ್ತಿ ವೆಚ್ಚವು ಶೇ.200ರಷ್ಟು ಮತ್ತು ಶುದ್ದೀಕರಣಕ್ಕೆ ಅಗತ್ಯವಿರುವ ರಸಾಯನಿಕ ಮತ್ತು ಇತರೆ ದುರಸ್ಥಿ ವೆಚ್ಚಗಳು ಶೇ.100ರಷ್ಟು ಹೆಚ್ಚಿರುವ ಪರಿಸ್ಥಿತಿಯಲ್ಲಿ ಸ್ಥಳೀಯ ಸಂಸ್ಥೆಗಳು ಕನಿಷ್ಠ ನೀರಿನ ದರಗಳನ್ನು ವಸೂಲಿ ಮಾಡಲು ಶಕ್ತವಾಗಿರುವುದಿಲ್ಲ ಮತ್ತು ತಾವು ವಸೂಲಿ ಮಾಡುವ ನೀರಿನ ದರದಿಂದ ನಿರ್ವಹಣೆ ಮತ್ತು ದುರುಸ್ಥಿ ಕಾರ್ಯಗಳನ್ನು ನೋಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಸಾರ್ವಜನಿಕ ವಿತರಣಾ ಕೊಳವೆಗಳಿಂದ (Pulbic Stand Post) ನೀರು ಪಡೆಯುತ್ತಿರುವ ಸಾರ್ವಜನಿಕರ ಮೇಲೆ ನೀರು ಬಳಕೆ ದರಗಳನ್ನು ವಿಧಿಸುವುದು ಸೂಕ್ತವಾಗಲಾರದೆಂದು ಅಭಿಪ್ರಾಯಪಟ್ಟು, ಸ್ಥಳೀಯ ಸಂಸ್ಥೆಗಳು ಗೃಹ ಬಳಕೆ ಸಂಪರ್ಕಗಳನ್ನು ಹೆಚ್ಚಿಸಿಕೊಂಡು ಹೋಗಲು ಒತ್ತು ನೀಡಿ, ಮೇಲಿನ ಕಾರಣಗಳಿಂದಾಗಿ ನೀರಿನ ದರಗಳನ್ನು ಮತ್ತು ನೀರು ಸರಬರಾಜು/ಒಳಚರಂಡಿ ಯೋಜನೆಗಳ ಆರ್ಥಿಕ ಮಾದರಿಯನ್ನು ಪರಿಷ್ಕರಿಸಲು ಸಮಿತಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ:ನಅಇ 07 ಯುಡಬ್ಲ್ಯೂಎಸ್ 2011,</u>**
**<u>ಬೆಂಗಳೂರು ದಿನಾಂಕ:20.07.2011</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ನಗರವನ್ನು ಹೊರತು ಪಡಿಸಿ ಕರ್ನಾಟಕ ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳು/ನಗರಸಭೆಗಳು /ಪುರಸಭೆಗಳು/ಪಟ್ಟಣ ಪಂಚಾಯಿತಿಯಗಳಲ್ಲಿ ಕೈಗೆತ್ತಿಕೊಳ್ಳುವ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳ ಆರ್ಥಿಕ ಮಾದರಿ ಮತ್ತು ಗ್ರಾಹಕರಿಗೆ ನೀರು ಸರಬರಾಜು ಮಾಡುವ ನೀರಿನ ದರ ಹಾಗೂ ನಿರ್ವಹಣಾ ದರಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ನಿಗದಿಪಡಿಸಿ ಪರಿಷ್ಕರಿಸಲು ಸರ್ಕಾರದ ಅನುಮೋದನೆ ನೀಡಿದೆ.

---4/-

ಎ) <u>ನೀರಿನ ದರ:</u>

(ಅ) ಬಳಕೆಗೆ ತಕ್ಕಂತೆ ನೀರು ದರ

| ಗ್ರಾಹಕ ವರ್ಗ | ನೀರಿನ ಬಳಕೆಗೆ ಅನುಗುಣವಾಗಿ ಪ್ರತಿ ತಿಂಗಳು ವಿಧಿಸಲಾಗುವ ದರ | | | |
|---|---|---|---|---|
| | ದರದ ಹಂತ | | ಬಳಕೆಯ ದರ | ಪ್ರತಿ ಸಂಪರ್ಕಕ್ಕೆ ಕನಿಷ್ಠ ದರ |
| | ಕನಿಷ್ಠ | ಗರಿಷ್ಠ | ರೂ/ಕಿ.ಲೀ | |
| | ಕಿ.ಲೀ | ಕಿ.ಲೀ | ರೂ/ಕಿ.ಲೀ | |
| ಗೃಹ ಸಂಪರ್ಕ | 0 | 8 | 7.00 | ರೂ.56/- |
| | 8 | 15 | 9.00 | |
| | 15 | 25 | 11.00 | |
| | 25 ಕ್ಕಿಂತ | ಅಧಿಕ | 13.00 | |
| ಗೃಹೇತರ ಸಂಪರ್ಕ | 0 | 8 | 14.00 | ರೂ.112/- |
| | 8 | 15 | 18.00 | |
| | 15 | 25 | 22.00 | |
| | 25 ಕ್ಕಿಂತ | ಅಧಿಕ | 26.00 | |
| ವಾಣಿಜ್ಯ/ಕೈಗಾರಿಕೆ | 0 | 8 | 28.00 | ರೂ.224/- |
| | 8 | 15 | 36.00 | |
| | 15 | 25 | 44.00 | |
| | 25 ಕ್ಕಿಂತ | ಅಧಿಕ | 52.00 | |

ಬಿ) <u>ಮೀಟರ್ ಹೊಂದದೆ ಇರುವಂತಹ ಸಂಪರ್ಕಕ್ಕೆ ಮಾಸಿಕ ಕನಿಷ್ಠ ದರ:</u>

| ಕ್ರಮ ಸಂಖ್ಯೆ | ಗ್ರಾಹಕ ವರ್ಗ | ಪ್ರತಿ ಸಂಪರ್ಕಕ್ಕೆ ಮಾಸಿಕ ಕನಿಷ್ಠ ದರ (ರೂ.ಗಳಲ್ಲಿ) | | |
|---|---|---|---|---|
| | | ಮಹಾನಗರ ಪಾಲಿಕೆಗಳು | ನಗರ ಸಭೆಗಳು | ಪುರ ಸಭೆಗಳು/ಪಟ್ಟಣ ಪಂಚಾಯಿತಿಗಳು |
| 1. | ಗೃಹ ಬಳಕೆ | 175 | 120 | 80 ✓ |
| 2. | ಗೃಹೇತರ ಬಳಕೆ | 350 | 240 | 160 ✓ |
| 3. | ವಾಣಿಜ್ಯ/ಕೈಗಾರಿಕೆ | 700 | 480 | 320 ✓ |

<u>ಟಿಪ್ಪಣಿ:-</u> ಯಾವುದೇ ಸ್ಥಳೀಯ ಸಂಸ್ಥೆಯು ನೀರು ಸರಬರಾಜನ್ನು ತಲಾ ದಿನಂ ಪ್ರತಿ 135 ಲೀಟರ್ ನಂತೆ ಸರಬರಾಜು ಮಾಡಲು ಸಾಮರ್ಥ್ಯ ಹೊಂದಿದ್ದಲ್ಲಿ ಮಹಾನಗರಪಾಲಿಕೆಗೆ ನಿಗದಿಪಡಿಸಿರುವ ದರಗಳನ್ನು ಜಾರಿಗೊಳಿಸಬಹುದಾಗಿರುತ್ತದೆ ಮತ್ತು ಗ್ರಾಹಕರು ಮೀಟರ್ ಸಂಪರ್ಕವನ್ನು ಪಡೆಯಲು ನಿರಾಕರಿಸಿದ್ದಲ್ಲಿ ನಿಗದಿಪಡಿಸಲಾದ ಕನಿಷ್ಠ ದರಗಳನ್ನು ನೋಟೀಸ್ ನೀಡಿದ 6 ತಿಂಗಳ ನಂತರ ಶೇ.25ರಷ್ಟು ಮತ್ತು ಒಂದು ವರ್ಷದ ನಂತರ ಶೇ.50ರಷ್ಟು ಹೆಚ್ಚಾಗಿ ವಿಧಿಸುವುದು.

ಸಿ) <u>ಒಂದು ಬಾರಿ ನೀರು ಸಂಪರ್ಕಗಳಿಗೆ ವಿಧಿಸುವ ದರ.</u>

| ಕ್ರಮ ಸಂಖ್ಯೆ | ಪ್ರವರ್ಗ | ಗೃಹ ಬಳಕೆ (ರೂ.ಗಳಲ್ಲಿ) | ಗೃಹೇತರ ಬಳಕೆ (ರೂ.ಗಳಲ್ಲಿ) | ವಾಣಿಜ್ಯ/ಕೈಗಾರಿಕೆ (ರೂ.ಗಳಲ್ಲಿ) |
|---|---|---|---|---|
| 1. | ಮಹಾನಗರ ಪಾಲಿಕೆಗಳು | 2,500/- | 5,000/- | 10,000/- |
| 2. | ನಗರ ಸಭೆಗಳು | 2,000/- | 4,000/- | 8,000/- |
| 3. | ಪುರ ಸಭೆಗಳು/ಪಟ್ಟಣ ಪಂಚಾಯಿತಿಗಳು | 1,500/- | 3,000/- | 6,000/- ✓ |

<u>ಒಳಚರಂಡಿ ಯೋಜನೆಗಳ ಬಳಕೆದಾರರ ದರ:</u>

| ಕ್ರಮ ಸಂಖ್ಯೆ | ಗ್ರಾಹಕ ವರ್ಗ | ಪ್ರತಿ ಸಂಪರ್ಕಕ್ಕೆ ಮಾಸಿಕ ಕನಿಷ್ಠ ದರ (ರೂ.ಗಳಲ್ಲಿ) | | |
|---|---|---|---|---|
| | | ಮಹಾನಗರ ಪಾಲಿಕೆಗಳು | ನಗರ ಸಭೆಗಳು | ಪುರ ಸಭೆಗಳು/ಪಟ್ಟಣ ಪಂಚಾಯಿತಿಗಳು |
| 1. | ಗೃಹ ಬಳಕೆ | 15 | 15 | 15 |
| 2. | ಗೃಹೇತರ ಬಳಕೆ | 30 | 30 | 30 |
| 3. | ವಾಣಿಜ್ಯ/ಕೈಗಾರಿಕೆ | 60 | 60 | 60 |

<u>ಟಿಪ್ಪಣಿ:-</u> ಒಳಚರಂಡಿ ವ್ಯವಸ್ಥೆ ಹೊಂದಿರುವಂತಹ ಸ್ಥಳೀಯ ಸಂಸ್ಥೆಗಳು ಮೇಲಿನ ದರಗಳನ್ನು ನೀರು ಸಂಪರ್ಕ ದರಗಳೊಂದಿಗೆ ಸೇರಿಸಿ ವಿಧಿಸತಕ್ಕದ್ದು.

ಇ) <u>ನೀರು ಸರಬರಾಜು ಯೋಜನೆಗಳ ಆರ್ಥಿಕ ಮಾದರಿ:</u>

| ಕ್ರಮ ಸಂಖ್ಯೆ | ಪ್ರವರ್ಗ | ಸರ್ಕಾರದ ಅನುದಾನ | ಆರ್ಥಿಕ ಸಂಸ್ಥೆಗಳಿಂದ ಸಾಲ | ಸ್ಥಳೀಯ ಸಂಸ್ಥೆಗಳ ಪಾಲು |
|---|---|---|---|---|
| 1. | ಮಹಾನಗರ ಪಾಲಿಕೆಗಳು | 40% | 50% | 10% |
| 2. | ನಗರ ಸಭೆಗಳು | 60% | 30% | ~~15%~~ 10 %. |
| 3. | ಪುರ ಸಭೆಗಳು | 75% | 20% | 5% |
| 4. | ಪಟ್ಟಣ ಪಂಚಾಯಿತಿಗಳು | 95% | - | 5% |

ಎಫ್) <u>ಒಳಚರಂಡಿ ಯೋಜನೆಗಳ ಆರ್ಥಿಕ ಮಾದರಿ:</u>

ಹಾಲಿ ಜಾರಿಯಲ್ಲಿರುವ ಒಳಚರಂಡಿ ಯೋಜನೆಗಳಿಗೆ ಆರ್ಥಿಕ ಮಾದರಿಯು ಸರ್ಕಾರದ ಸಾಲದಿಂದ, ಹಣಕಾಸು ಸಂಸ್ಥೆಗಳಿಂದ ಸಾಲ, ಮತ್ತು ಸ್ಥಳೀಯ ಸಂಸ್ಥೆಗಳ ವಂತಿಕೆಯಿಂದ ಯೋಜನೆಯ ಅಂದಾಜನ್ನು ಭರಿಸಲಾಗುತಿತ್ತು. ಸ್ಥಳೀಯ ಸಂಸ್ಥೆಗಳಲ್ಲಿ ವಾಸಿಸುತ್ತಿರುವ ನಾಗರೀಕರ ಹಿತದೃಷ್ಟಿಯಿಂದ, ಪರಿಸರ ಸಂರಕ್ಷಣೆಯ ಹಿತದಲ್ಲಿ ಮತ್ತು ಮಲೀನ ನೀರು ನದಿಗಳನ್ನು / ಅಂತರ್ ಜಲ ನೀರನ್ನು ಕುಲುಷಿತಗೊಳಿಸದಿರುವ ದೃಷ್ಟಿಯಿಂದ ಒಳಚರಂಡಿ ವ್ಯವಸ್ಥೆಯನ್ನು ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಕಲ್ಪಿಸಲು ಯೋಜನೆಯ ಆರ್ಥಿಕ ಮಾದರಿಯಲ್ಲಿ ಸರ್ಕಾರದ ಸಾಲಕ್ಕೆ ಬದಲಾಗಿ ಸರ್ಕಾರದಿಂದ ಅನುದಾನ ನೀಡುವ ನಿಟ್ಟಿನಲ್ಲಿ ಪರಿಗಣಿಸಬೇಕಾಗಿರುವುದು ಅವಶ್ಯಕವಾಗಿರುತ್ತದೆ. ಆದ್ದರಿಂದ ಒಳಚರಂಡಿ ವ್ಯವಸ್ಥೆಗಳ ಆರ್ಥಿಕ ಮಾದರಿಯನ್ನು ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

| ಕ್ರಮ ಸಂಖ್ಯೆ | ಪ್ರವರ್ಗ | ಸರ್ಕಾರದ ಅನುದಾನ | ಆರ್ಥಿಕ ಸಂಸ್ಥೆಗಳಿಂದ ಸಾಲ | ಸ್ಥಳೀಯ ಸಂಸ್ಥೆಗಳ ಪಾಲು |
|---|---|---|---|---|
| 1. | ಮಹಾನಗರ ಪಾಲಿಕೆಗಳು | 50% | 35% | ~~10%~~ 15 %. |
| 2. | ನಗರ ಸಭೆಗಳು | 70% | 20% | 10% |
| 3. | ಪುರ ಸಭೆಗಳು | 75% | 20% | 5% |
| 4. | ಪಟ್ಟಣ ಪಂಚಾಯಿತಿಗಳು | 95% | - | 5% |

ಮೇಲೆ ನಿಗದಿಪಡಿಸಿರುವ ದರಗಳನ್ನು ಜಾರಿಗೆ ತರಲು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ಮಾರ್ಗಸೂಚಿಗಳನ್ನು ನೀಡಿದ್ದು, ಅದರಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳು ನೀರಿನ ದರಗಳನ್ನು ಪ್ರತಿ 3 ವರ್ಷಕ್ಕೊಮ್ಮೆ ಪರಿಷ್ಕರಿಸಿ ಅನ್ವಯಿಸಿಕೊಳ್ಳತಕ್ಕದ್ದು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ/ಕೆ.ಯು.ಐ.ಡಿ.ಎಫ್.ಸಿ ಚಾಲನೆಗೊಳಿಸಿದ ನೀರು ಸರಬರಾಜು ಅಥವಾ ಒಳಚರಂಡಿ ಯೋಜನೆಗಳ ಹಸ್ತಾಂತರಿಸುವ ಅಥವಾ ಹಿಂದಕ್ಕೆ ಪಡೆಯುವ ಕುರಿತು ಮತ್ತು ಸಗಟು ನೀರು ಸರಬರಾಜು/ಗ್ರಾಹಕರ ಹಂತದವರೆಗೆ ನೀರು ಸರಬರಾಜು ವ್ಯವಸ್ಥೆಯನ್ನು ನಿರ್ವಹಿಸಲು ಮಂಡಳಿಗೆ ಹಸ್ತಾಂತರಿಸುವ ಹಾಗೂ ಇದಕ್ಕೆ ಸಂಬಂಧಿಸಿದಂತೆ ಉದ್ಭವಿಸಬಹುದಾಂತಹ ತಂಟೆ ತಕರಾರುಗಳನ್ನು ಇತ್ಯರ್ಥಗೊಳಿಸಲು ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಲಾಗಿದೆ.

| ಕ್ರ.ಸಂ | ಹುದ್ದೆ | ವಿವರ |
|---|---|---|
| 1. | ಸರ್ಕಾರದ ಕಾರ್ಯದರ್ಶಿ,(ಎಂ.&ಯು.ಡಿ.ಎ.)<br>ನಗರಾಭಿವೃದ್ಧಿ ಇಲಾಖೆ, | ಅಧ್ಯಕ್ಷರು |
| 2. | ವ್ಯವಸ್ಥಾಪಕ ನಿರ್ದೇಶಕರು,<br>ಕನನೀಸ ಮತ್ತು ಒಳಚರಂಡಿ ಮಂಡಳಿ. | ಸಂಚಾಲಕರು ಮತ್ತು ಸದಸ್ಯರು |
| 3. | ನಿರ್ದೇಶಕರು,<br>ಪೌರಾಡಳಿತ ನಿರ್ದೇಶನಾಲಯ | ಸದಸ್ಯರು |
| 4. | ಆಯುಕ್ತರು / ಮುಖ್ಯಾಧಿಕಾರಿಗಳು<br>ಸಂಬಂಧಪಟ್ಟ ಸ್ಥಳೀಯ ಸಂಸ್ಥೆ | ಸದಸ್ಯರು |

**ಸೂಚನೆ:**-ಎಲ್ಲಾ ಸ್ಥಳೀಯ ಸಂಸ್ಥೆಗಳು ನೀರು ಸರಬರಾಜು/ಒಳಚರಂಡಿ ನಿರ್ವಹಣೆ ಕುರಿತಂತೆ ಉದ್ಭವಿಸಬಹುದಾಂತಹ ತಕರಾರುಗಳನ್ನು ಮೇಲಿನ ಸಮಿತಿಯ ಮುಂದೆ ಮಂಡಿಸುವ ಮುನ್ನ ಪೌರಾಡಳಿತ ನಿರ್ದೇಶನಾಲಯದ ಮೂಲಕ ತಮ್ಮ ಮನವಿಯನ್ನು ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: FD 529 Exp-9:2009, ದಿನಾಂಕ:24.09.2009 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

20/3/11
(ಎಂ.ಎಂ.ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು.

ಪ್ರತಿಯನ್ನು:
1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
3. ಅಧ್ಯಕ್ಷರು/ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ... ಬೆಂಗಳೂರು.

..7/-

4. ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ. ಬೆಂಗಳೂರು.
5. ಆಯುಕ್ತರು ಮತ್ತು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು.
6. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
7. ಮಾನ್ಯ ನಗರಾಭಿವೃದ್ಧಿ ಮತ್ತು ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
8. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ ಪ್ರಕರಣ ಸಂಖ್ಯೆ:ಸಿ343/2011) ವಿಧಾನಸೌಧ, ಬೆಂಗಳೂರು.
9. ಎಲ್ಲಾ ಜಿಲ್ಲಾಧಿಕಾರಿಗಳು.
10. ಎಲ್ಲಾ ಆಯುಕ್ತರು, ಮಹಾನಗರಪಾಲಿಕೆಗಳು/ನಗರಸಭೆಗಳು.
11. ಎಲ್ಲಾ ಮುಖ್ಯಾಧಿಕಾರಿಗಳು/ಪುರಸಭೆ/ಪಟ್ಟಣಪಂಚಾಯಿತಿ.
12. ಸರ್ಕಾರದ ಅಧೀನ ಕಾರ್ಯದರ್ಶಿಗಳು ,ಆರ್ಥಿಕ ಇಲಾಖೆ ವೆಚ್ಚ-9, ವಿಧಾನಸೌಧ.
13. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
14. ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
15. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು.